**Code No. 16 Y**

### ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ದ್ವಿತೀಯ ಪತ್ರಿಕೆ

## (ವಿಸ್ತರಿಸುವಿಕೆ)

ಜನವರಿ, 2018

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಣೆ : 3 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ ಅವುಗಳನ್ನು ಸ್ವಲ್ಪ **ಎತ್ತರಿಸಿದ ಧ್ವನಿಯಲ್ಲಿ** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಕನ್ನಡ ನಾಡಿನ ಹೆಸರಾಂತ ಪತ್ರಕರ್ತೆ ಗೌರಿ ಲಂಕೇಶರವರ ನಿಧನ ಕನ್ನಡ ಜನತೆಗೆ ತುಂಬಲಾರದ ನಷ್ಟ. ಇವರು ಪತ್ರಿಕಾ ರಂಗದಲ್ಲಿ ಅತ್ಯಂತ ಉತ್ತುಂಗ
$\frac{1}{4}$ ಸ್ಥಾನಕ್ಕೆರಿದವರಾಗಿದ್ದರು. ಇವರ ಜೀವನ/ವನ್ನೇ ಪತ್ರಿಕಾರಂಗಕ್ಕೆ ಮುಡುಪಾಗಿಟ್ಟಿದ್ದರು ಇವರು ಸೃಜನಶೀಲರು ಮತ್ತು ತುಂಬಾ ಧೈರ್ಯವಂತರು ಆಗಿದ್ದರು ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಕರ್ನಾಟಕದ ಅತ್ಯಂತ ಭಯಾನಕ
ನಕ್ಸಲೈಟ್ ಪಿಡುಗಿನ ವಿರುದ್ಧ ಹೋ/ರಾಟ ನಡೆಸಿ $\frac{1}{2}$
ಅವರಲ್ಲಿ ಕೆಲವರನ್ನು ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದರು. ಸಾಹಿತ್ಯ, ಶಾಸನ, ಜಾನಪದ, ನಾಮ ವಿಜ್ಞಾನ, ಗ್ರಂಥ ಸಂಪಾದನೆ, ಮೊದಲಾದ ಕ್ಷೇತ್ರಗಳಲ್ಲಿ ಇವರ ಕೊಡುಗೆ
ಅಮೂಲ್ಯವಾದುದು. ಅವರು ಅನಾಮಧೇ/ಯ $\frac{3}{4}$
ವ್ಯಕ್ತಿಗಳ ಗುಂಡಿಗೆ ಬಲಿಯಾಗಿ ನಿಧನರಾದ ಸುದ್ದಿ

[ Turn over

ಕರ್ನಾಟಕದ ಜನತೆಗೆ ಬಡಿದಂತಾಗಿದೆ. ಅಲ್ಲದೆ ಕನ್ನಡ ಪತ್ರರಂಗಕ್ಕೆ ಕತ್ತಲು ಕವಿದಂತಾಗಿದೆ.

**ಈ ಮೇಲ್ಕಂಡ ವಿಷಯಗಳನ್ನು**
1 **ಅಳವಡಿಸಿಕೊಂಡು ಮುXಖ್ಯಮಂತ್ರಿಗಳ ಹೆಸರಿನಲ್ಲಿ ಒಂದು ಸಂತಾಪ ಸೂಚಕ ಸಂದೇಶವನ್ನು ತಯಾರಿಸಿ.** (ಅಂಕಗಳು : 20)

***ಪ್ರಶ್ನೆ ಎರಡು :*** ಸನ್ ಎರಡು ಸಾವಿರದ ಹದಿನೇಳನೇ ಇಸವಿ ನವೆಂಬರ್ ಇಪ್ಪತ್ತನೇ ತಾರೀಖು ಸೋಮವಾರದಂದು ಗೌಡರ
$\frac{1}{4}$ ಜಯದೇವಪ್ಪ ಮ/ತ್ತು ಮಕ್ಕಳು, ಹೊಸ ತೀರ್ಥಹಳ್ಳಿ ರಸ್ತೆ, ಶಿವಮೊಗ್ಗ, ಇವರು ಬರೆದ ಪತ್ರಕ್ಕೆ ಉತ್ತರವಾಗಿ ಶಿವರಾತ್ರಿ, ಯುಗಾದಿ ಹಾಗೂ ಮತ್ತಿತರ ಹಬ್ಬಗಳ ಪ್ರಯುಕ್ತ ಅವಶ್ಯಕವಾಗಿ ಬೇಕಾಗಿರುವ ಕಾಂಚೀವರಂ
$\frac{1}{2}$ ಮತ್ತಿತ್ತರ ರೇಷ್ಮೆ ಸೀರೆಗಳ/ನ್ನು ಖರೀದಿಸುವ ಬಗ್ಗೆ ಮಂಗಳಾ ಸಿಲ್ಕ್ ಷಾಪ್, ಪಾವಗಡ ರಸ್ತೆ, ತುಮಕೂರು ಜಿಲ್ಲೆ, ತುಮಕೂರು ಇವರ ಪತ್ರ. ಬಿಳಿ, ಕಪ್ಪು, ನೀಲಿ ಮತ್ತು ನೇರಳೆ ಬಣ್ಣದ ರೇಷ್ಮೆ ಸೀರೆಗಳಿಗೆ ಹೆಚ್ಚು ಬೇಡಿಕೆ ಇದೆ. ಆದ್ದರಿಂದ ಶೇಕಡ
$\frac{3}{4}$ ಮೂವತ್ತೇರ/ಡು ಸೋಡಿಯಂತೆ ಸುಮಾರು ಒಂದು ಸಾವಿರದ ಒಂಬತ್ತು ನೂರು ಕಾಂಚಿವರಂ, ಎರಡು ಸಾವಿರದ ಎರಡು ನೂರು ರೇಷ್ಮೆ ಮತ್ತು ಮೂರು ಸಾವಿರದ ಮೂರು ನೂರು ಮತ್ತಿತ್ತರ ಪಾಲಿಸ್ಟರ್ ಸೀರೆಗಳನ್ನು ಕಳುಹಿಸುವುದು.

**ಈ ಅಂಶಗಳನ್ನೊಳXಗೊಂಡಂತೆ ಒಂದು** 2
**ವ್ಯವಹಾರ ಪತ್ರ ಸಿದ್ಧಪಡಿಸಿ.**

(ಅಂಕಗಳು : 20)

***ಪ್ರಶ್ನೆ ಮೂರು :*** ಕರ್ನಾಟಕ ಸರ್ಕಾರ ವಿಧಾನಸೌಧದ ವಜ್ರ ಮಹೋತ್ಸವ ಸಮಾರಂಭದ ಉದ್ಘಾಟನೆ ಮಾಡಿದ ಸನ್ಮಾನ್ಯ ರಾಷ್ಟ್ರಪತಿಯವರು, ಮುಖ್ಯ ಅತಿಥಿಗಳಾದ
ಕೇಂದ್ರ ಸಚಿವ/ರಿಂದ ಬಹುಮಾನ $\frac{1}{4}$
ವಿನಿಯೋಗ, ವಿಧಾನ ಸಭಾ ಅಧ್ಯಕ್ಷರಾದ ಕೆ.ಬಿ. ಕೋಳಿವಾಡ ಇವರಿಗೆ ಬೀಳ್ಕೊಡುಗೆ, ಕಾರ್ಯಕ್ರಮ : ಪ್ರಾರ್ಥನೆ, ಸ್ವಾಗತ ಭಾಷಣ, ಶುಭಸಂದೇಶ, ಮುಖ್ಯ ಅತಿಥಿಗಳಿಂದ ಭಾಷಣ, ಅಧ್ಯಕ್ಷರಾದ ಶ್ರೀ ಸಿದ್ದರಾಮಯ್ಯ,
ಮು/ಖ್ಯಮಂತ್ರಿಗಳು ಇವರಿಂದ ಭಾಷಣ, $\frac{1}{2}$
ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಮತ್ತು ಅಂಗಾಂಗದಾನ ಶಿಬಿರ, ವಿಚಾರ ಸಂಕೀರ್ಣ, ಖ್ಯಾತ ಗಾಯಕಿಯಾದ ಶ್ರೀಮತಿ. ಆರ್. ಸವಿತಾ ಮತ್ತು ತಂಡದವರಿಂದ
ಗಾಯನ ಕಾರ್ಯಕ್ರಮಗಳು ನ/ಡೆದವು. $\frac{3}{4}$
ಕರ್ನಾಟಕ ಸರ್ಕಾರ ಸಚಿವಾಲಯದ ಹಿರಿಯ ಮತ್ತು ನುರಿತ ನೌಕರರಿಗೆ ಗೌರವ

ಸಮರ್ಪಣೆಯೊಂದಿಗೆ ಸಮಾರಂಭದ
ಮುಕ್ತಾಯ.

**ಈ ಅಂಶಗಳನ್ನೊಳಗೊಂಡಂತೆ ವಜ್ರ**
**ಮಹೋತ್ಸವದ ಸಮಾರಂಭ ಸಮಿತಿಯ**
3 **ಕಾರ್ಯXದರ್ಶಿಯವರಿಂದ ವಿವರವಾದ**
**ವಂದನಾರ್ಪಣಾ ಭಾಷಣ ತಯಾರಿಸಿ.**

(ಅಂಕಗಳು : 20)

**ಪ್ರಶ್ನೆ ನಾಲ್ಕು :** ದಾವಣಗೆರೆ ನಗರಾಭಿವೃದ್ಧಿ
ಪ್ರಾಧಿಕಾರದಿಂದ ವಿನೋಬನಗರ ಎರಡನೇ
ಹಂತದಲ್ಲಿರುವ ಮೂವತ್ತು ಐವತ್ತು ಅಡಿ
$\frac{1}{4}$ ಅಳತೆಯ ವಾಸಕ್ಕೆ/ ಯೋಗ್ಯವಾದ ನಾಲ್ಕು
ಮೂಲೆ ನಿವೇಶನಗಳ ಬಹಿರಂಗ ಹರಾಜಿನ
ಮೂಲಕ ಮಾರಾಟ. ನಿವೇಶನ ಸಂಖ್ಯೆ
ನಲವತ್ತೆರಡು, ಅರವತ್ನಾಲ್ಕು, ಎಪ್ಪತ್ನಾಲ್ಕು,
ಎಂಬತ್ತೈದು ಮತ್ತು ತೊಂಬತ್ತಾರರ ನಿವೇಶನಗಳು
$\frac{1}{2}$ ಎಲ್ಲಿ ಹೇಗಿವಿಯೋ ಹಾಗೆಯೇ/ ಮುಂದಿನ
ತಿಂಗಳು ಹದಿನೈದರಂದು ಬೆಳಿಗ್ಗೆ ಹನ್ನೊಂದು
ಗಂಟೆಗೆ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ
ಆವರಣದಲ್ಲಿ ಹರಾಜು ಮಾಡಲಾಗುವುದು.
ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಒಂದು
$\frac{3}{4}$ ಗಂಟೆ ಮುಂಚಿತವಾಗಿ/ ಪ್ರಾಧಿಕಾರದಿಂದ
ಅಧಿಕಾರ ಹೊಂದಿದ ಅಧಿಕಾರಿಯ ಹತ್ತಿರ
ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿಗಳ
ಮುಂಗಡ ಠೇವಣಿ ಹಣ ಇಡತಕ್ಕದ್ದು ಹರಾಜು
ನಿಯಮಗಳನ್ನು ಒಳಗೊಂಡಂತೆ **ಹರಾಜು**
**ಪ್ರಕಟಣೆಯನ್ನು ದಾXವಣಗೆರೆ ನಗರಾಭಿವೃದ್ಧಿ** 4
**ಪ್ರಾಧಿಕಾರದ ಪರವಾಗಿ ತಯಾರಿಸಿ.**

(ಅಂಕಗಳು : 20)

**ಪ್ರಶ್ನೆ ಐದು :** ಐವತ್ತನೇ ಕನ್ನಡ ರಾಜ್ಯೋತ್ಸವದ
ಅಂಗವಾಗಿ ಡಾಕ್ಟರ್ ರಾಜ್‌ಕುಮಾರ್
ಅಭಿಮಾನಿಗಳ ಸಂಘದವರು ಬೆಂಗಳೂರಿನಲ್ಲಿ
ನವೆಂಬರ್ ಹದಿನೈ/ದರಿಂದ ಇಪ್ಪತ್ತರವರೆಗೆ $\frac{1}{4}$
ವಿಧಾನಸೌಧದಲ್ಲಿರುವ ಸಮ್ಮೇಳನದ
ಸಭಾಂಗಣದಲ್ಲಿ ರಕ್ತದಾನ ಶಿಬಿರವನ್ನು
ಏರ್ಪಡಿಸಿರುತ್ತಾರೆ. ರಾಜ್ಯದ ಜನತೆ ಎಲ್ಲಾ
ಭಾಗಗಳಿಂದ ಬಂದು ಹೋಗಲು ಉಚಿತವಾಗಿ
ಸಾರಿಗೆ ವ್ಯವಸ್ಥೆಯ/ನ್ನು ಮಾಡಲಾಗಿರುತ್ತದೆ. $\frac{1}{2}$
ಈ ರಕ್ತವನ್ನು ಅವಶ್ಯವಿರುವ ಬಡರೋಗಿಗಳಿಗೆ
ಉಚಿತವಾಗಿ ನೀಡಲಾಗುವುದು ಶಿಬಿರಕ್ಕೆ
ಹೆಚ್ಚು ಹೆಚ್ಚು ಜನರನ್ನು ಕರೆತರುವ
ಕಾರ್ಯಕರ್ತರಿಗೆ ವಿಶೇಷ ಬಹುಮಾನವಿದೆ.
ರಕ್ತದಾನಿಗಳಿಗೆ/ ನೆನಪಿನ ಕಾಣಿಕೆಯನ್ನು $\frac{3}{4}$
ಪುನೀತ್ ರಾಜ್‌ಕುಮಾರರವರು ನೀಡಲಿದ್ದಾರೆ.
ಕಾರ್ಯಕ್ರಮದ ಯಶಸ್ಸಿಗೆ ರಕ್ತದಾನಿಗಳು
ಮತ್ತು ಕಾರ್ಯಕರ್ತರು ಶ್ರಮಿಸಲು ವಿನಂತಿ
ಸಂಘದ ಅಧ್ಯಕ್ಷರ ಪರವಾಗಿ ಮನವಿಯನ್ನು
ಸಿದ್ದಪಡಿಸಿ.X (ಅಂಕಗಳು : 20) 5